ಏಪ್ರಿಲ್, ಮೇ ತಿಂಗಳ ಧಗೆಯ ಬಗೆಬಗೆಯ ಬೆವರನ್ನೂ ಸಹಿಸಿದ್ದ ಭೂಮಿ ತಂಪಾಗಿತ್ತು. ಆಗಸದ ಅಂಗಳದಲ್ಲಿ ಮೂಡುತ್ತಿದ್ದ ಮುಗಿಲುಗಳ ನಾಟ್ಯ ಮುದ ನೀಡುತ್ತಿತ್ತು. ಪನ್ನೀರಿನ ಹಾಗೆ ಆಗಾಗ ಹನಿ ಜಿನುಗುತ್ತಿದ್ದವು. ಪಶ್ಚಿಮದಿಂದ ಪೂರ್ವಕ್ಕೆ ಉರುಳುರುಳಿ ಹೋಗುವ ಮೋಡಗಳಂತೆ ದಿನಗಳೂ ಚಕಚಕಾಂತ ಕಳೆದು ಹೋಗುತ್ತಿದ್ದವು. ಮಾಯಿಯ ನೆನಪು, ಭಾವ ಸಾಂಗತ್ಯ, ಮಾತಿನ ಸೌಂದರ್ಯವನ್ನೇ ಪ್ರತಿಮೆ ಮಾಡಿ ಬರೆದ ಐವತ್ತು ಕವನಗಳ 'ಸಂಭವ' ಸಂಕಲನವೂ ಪ್ರಕಟವಾಯಿತು! ವಿಮರ್ಶಕರಿಂದ, ಹಿತೈಷಿಗಳಿಂದ ಹೊಗಳಿಕೆ ಬಂದ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾರೆ. ಇದರ ಹೊರತಾಗಿ ಅವಳ ಕುರಿತು ವರ್ಣಿಸಿದಷ್ಟೂ ಬರೆದಷ್ಟೂ ಸೃಜನಕ್ರಿಯೆಗೆ ಸಾಣೆ ಹಿಡಿದಂತಾಗತೊಡಗಿತ್ತು. ಇಂತಹ ಸಂಕ್ರಮಣ ಸ್ಥಿತಿಯಲ್ಲಿ 'ನೀವ್ಯಾಕ ಒಂದ್ ಕಾದಂಬರಿ ಬರೀ ಬಾರ್ದು' ಎಂಬುದು ಮಾಯಿಯ ಒತ್ತಾಯ. ಜೊತೆಗೆ ಆಮಂತ್ರಣ ಬೇರೆ! ಆಕೆ ಕಳುಹಿಸಿರುವ ಲಕೋಟೆಯೊಳಗೆ, ಕಿತ್ತೂರು ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್‌ನ ಮೂರು ಎ ಕ್ಲಾಸ್ ರೈಲ್ವೆ ಟಿಕೆಟ್ ಇದ್ದವು! ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಚಡಿ ವಾಡೆಗೆ ಹೇಗೆ ಬರಬೇಕು? ಎಲ್ಲಿ ರೈಲು ಇಳಿಯ ಬೇಕು? ಯಾರು ನಮ್ಮನ್ನು ಡ್ರಾಪ್ ಮಾಡ್ತಾರೆ, ಇತ್ಯಾದಿ ಮಾರ್ಗದರ್ಶನ. ಜೊತೆಗೆ ನಾಲ್ಕು ಮಾತಿನ ಒಕ್ಕಣೆ: 'ಬಾಷಾ, ನನ್ನನ್ನು ನೀವ್ ಇಷ್ಟ್ ವರ್ಷ ನೋಡದಂಗಾ ಕಳೆದ್ರಿ. ಆತು ನೀವಾ ಗೆದ್ರಿ. ನಾನಾ ಸೋತೆ. ಅದೇನೇ ಇರ್ಲಿ, ನಿಮ್ಮನ್ನು ನಾನು ನೋಡಾಕ ಬೇಕು. ಹಿಂಗೈತಿ ನೋಡ್ರಿ ಕತಿ. ನನ್ ಗಂಡನಿಗೂ ತಿಳಿಸೀನಿ. ಅದೇನ್ ಮಾಡ್ತಿರೋ ಗೊತ್ತಿಲ್ಲ. ನಿಮ್ ಜೊತಿ ಸುರೇಶ, ಸಾಜಿದಾ ಬರಾಕಬೇಕು —ಮಾಯಿ.'

ಇದ್ದಕ್ಕದ್ದಂತೆ ಬಂದ ಮಾಯಿಯ ಈ ಮೇಘ ಸಂದೇಶಕ್ಕೆ ದಂಗಾಗಿದ್ದೆ. ಅವಳನ್ನು ನೋಡುವ ಬಯಕೆ, ಬೇಗುದಿ ಮೊದಲ ಬಾರಿ ಮೂಡಿದ ಖುಷಿ ಒಂದೆಡೆಯಾದರೆ ಸಾಜಿದಾ, ಸೂರಿಯನ್ನು ಒಪ್ಪಿಸಿ, ಬೆಂಗಳೂರಿನ ಯಶವಂತಪುರದ ರೈಲ್ವೆ ನಿಲ್ದಾಣಕ್ಕೆ ಬಂದು, ಕಿತ್ತೂರು ರಾಣಿಚೆನ್ನಮ್ಮನ ಎಕ್ಸ್‌ಪ್ರೆಸ್ ರೈಲಲ್ಲಿ ಕುಳಿತುಕೊಳ್ಳುವುದರೊಳಗೆ ಮೈಯಲ್ಲಾ ಬೆವರು. ರೈಲಲ್ಲಿ ಮಾಯಿ ಬಗ್ಗೆಯೇ ಮಾತು. ನನ್ನ ತಿಕ್ಕಲುತನವನ್ನು ಸಹಿಸಿಕೊಂಡ ಪತ್ನಿಯ ಔದಾರ್ಯ, ಒಂದು ಕಂಪನಿಗೆ ಎಂಡಿ ಆಗಿದ್ದೂ, ಎಲ್ಲಾ ಬಾಧ್ಯತೆಗಳನ್ನು ಬದಿಗಿಟ್ಟು ಬಂದ ಸೂರಿಯ ಗೆಳೆತನಕ್ಕೆ ನಾನು ಒಳಗೊಳಗೆ ಸಲಾಮು ಹೇಳಿಕೊಳ್ಳುತ್ತಲೇ ನಿದ್ದೆಗೆ ಜಾರಿದ್ದೆ.

*****

ಧಾರವಾಡದಲ್ಲಿ ನಾವು ಇಳಿಯುವುದರೊಳಗೆ ಸ್ಕಾರ್ಪಿಯೋ ಕಾರು ರೆಡಿಯಾಗಿತ್ತು. ಬೆಂಗಳೂರಿನ ಭಯಾನಕ ಒತ್ತಡ ಬದುಕಿಗೂ, ಚಚಡಿ ವಾಡೆಯತ್ತ ಓಡುತ್ತಿರುವ ಈ ಕಾರಿನ ಹಿತಕರ ಓಟಕ್ಕೂ ಡ್ರೈವರ್ ಗುತ್ತೇದಾರ್ ಕಡೇಮನಿ ಬ್ರೇಕ್ ಹಾಕುತ್ತಾ, 'ವಾಡೆ'ಯ ಪೂರ್ವಾಪರ ಕುರಿತು ಹೇಳುತ್ತಿದ್ದ. ಕಾಸರವಳ್ಳಿಯವರ ಸೀರಿಯಲ್‌ನಲ್ಲಿ ಮಾತ್ರ ವಾಡೆಯನ್ನು ನೋಡಿದ್ದ ನಮಗೆ ಸಂತಸದ ಜೊತೆ ಜೊತೆ, ಆತನ ಸಂವಾದವೂ ಚೆಂದ. 'ವಾಡೆಗಳಂದ್ರಾ ಅರಮನೀರೀ. ಮೈಸೂರ್ ಅರಮನಿ ನಾವ್ ನೋಡಿಲ್ರೀ. ಆದ್ರಾ ಅಣ್ಣಿಗೇರಿ ವಾಡೆ, ಗಜೇಂದ್ರಗಡದ ವಾಡೆ, ತಲ್ಲೂರ ವಾಡೆ, ಕವಲೂರ ವಾಡೆ ನೋಡೀವ್ರೀ! ಆದ್ರಾ ಆಗಿನ ಕಾಲದ ಜೋರು ಈಗಿಲ್ರೀ. ಹೋದ್ಸಲದ ಚೈತ್ರ ಕಾರ್ತೀಕದೊಳಗ ಹೋಳೀನು ಚೆಂದಾಗ್ಲಿಲ್ರೀ. ಸರಸ್ವತೀ ಸರ್ದೇಸಾಯಿ ಕುಲಕರ್ಣೀ ಅಮ್ಮೋರ(ಮಾಯಿ) ಮನಸ್ಸು ಸರೀ ಇರ್ಲಿಲ್ರೀ!'

ಗುತ್ತೇದಾರ್ ಕಡೇಮನಿಯ ಮಾತು, ಮಾಯಿಯ ಕಡೆ ಹೊರಳಿದಾಗ ನನ್ನ ಲಹರಿ ಜಾಗೃತವಾಯಿತು. ಮಾಯಿ ಈ ಭಾಗದ ಅಗರ್ಭ ಶ್ರೀಮಂತ ಮನೆತನದವಳು ಅಂತ ನನಗೆ ಇಂದೇ